**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ . ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| **ಸಿ.ಸಿ. ನಂ :-** | 1114/2019 |
| **ಸಿ.ಡಬ್ಲ್ಯೂ : -3** | **ಪಿ.ಡಬ್ಲ್ಯೂ - 2** |
| **ದಿನಾಂಕ :-** | **20.09.2024** |

| | |
|---|---|
| ಹೆಸರು | ಜಾಯ್ |
| ತಂದೆ/ತಾಯಿ/ಗಂಡನ ಹೆಸರು | ಜೋಸೆಫ್ |
| ವಯಸ್ಸು | 53 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ | ಸರ್ಜಾಪುರ |

**ಸಾಕ್ಷಿ ಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಪ್ರಾಜ್ಞ ಸ. ಸ. ಅ ರವರಿಂದ**

ಸಾಕ್ಷಿಗೆ ನಿಪಿ 2 ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 (ಬಿ) ಎಂದು ಗುರುತಿಸಲಾಯಿತು. ದಿನಾಂಕ 11-1-2019 ರಂದು ಸದರಿ ಸಹಿಯನ್ನು ಅಪಘಾತವಾದ ಸ್ಥಳವಾದ ಕಾಡ ಅಗ್ರಹಾರದಲ್ಲಿ ಮಾಡಿರುತ್ತೇನೆ. ಅಪಘಾತ ವಿಚಾರವಾಗಿ ಸದರಿ ಸಹಿ ಮಾಡಿರುತ್ತೇನೆ. ಆಗ ಅಲ್ಲಿ ಪೋಲಿಸರು ಇದ್ದರು. ಆಗ ಸಮಯ ಬೆಳಿಗ್ಗೆ 8 ರಿಂದ 9 ಗಂಟೆ ಆಗಿತ್ತು.

**(ಮಾನ್ಯ ಸ. ಸ. ಅ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಹಾಗೂ ವಾಟೀ ಸವಾಲಿಗೆ ಅವಕಾಶ ಕೋರಿದ್ದು, ಅವರ ಮನವಿ ಅಂಗೀಕರಿಸಿ ವಾಟೀ ಸವಾಲಿಗೆ ಅವಕಾಶ ಮಾಡಿಕೊಡಲಾಗಿದೆ.)**

**ವಾಟೀ ಸವಾಲುಃ ಪ್ರಾಜ್ಞ ಸ. ಸ. ಅ ರವರಿಂದ**

ದಿನಾಂಕ 12-1-2019 ರಂದು ಪೋಲಿಸರು ಘಟನಾ ಸ್ಥಳದಲ್ಲಿ ಮಹಜರ್ ಮಾಡಿದಾಗ ನಾನು ನಿಪಿ2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಆಗ ಪೋಲಿಸರು ಘಟನಾ ಸ್ಥಳದಲ್ಲಿ ಅಪಘಾತದಲ್ಲಿ ಭಾಗಿಯಾದ ಮೋಟಾರ್ ಸೈಕಲ್ ನಂಬರ್ ಕೆಎ-1-ಎಚ್‌ಯು-1811 ನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ಆಗ ಚಾಸಾ 1 ಮತ್ತು 2 ಇದ್ದರು ಎಂದರು ಸರಿ.

**ವಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಇ ಎನ್ ವಕೀಲರಿಂದಃ**

ಮೃತ ಬೈಜು ಜಾಯ್ ನನ್ನ ಸ್ನೇಹಿತ. ಅಪಘಾತವಾದ ನಂತರ ಸೈ ಜಾನ್ ಎಂಬುವವರು ನನಗೆ ಕರೆ ಮಾಡಿ ದೂರು ಕೊಡಿ ಎಂದು ತಿಳಿಸಿದರು. ನಂತರ ಆ ವಿಚಾರ ನಾನು ಪೋಲಿಸರಿಗೆ ತಿಳಿಸಿರುತ್ತೇನೆ. ನಾನು ಬರವಣಿಗೆಯಲ್ಲಿ ಕೊಟ್ಟಿಲ್ಲ. ಆವತ್ತು ಅಲ್ಲೇ ಇದ್ದು, ನಂತರ ನಾನು ಮಾರನೇ ದಿನ ಪೋಲಿಸರು ಕರೆದಾಗ ಘಟನಾ ಸ್ಥಳಕ್ಕೆ ಹೋಗಿದ್ದರಾ ಎಂದರೆ ಸರಿ. ನಾನು ಪೋಲಿಸ್ ಠಾಣೆಯಲ್ಲಿ ಸಹಿ

ಮಾಡಿರುತ್ತೇನೆ. ಅದನ್ನು ನಾನು ಓದಿರುತ್ತೇನೆ. ಮೃತರ ಕುಟುಂಬಕ್ಕೆ ವಿಮೆ ಸಿಗಲಿ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ . ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| **ಸಿ.ಸಿ. ನಂ :-** | 1114/2019 |
| **ಸಿ.ಡಬ್ಲ್ಯೂ : -1** | **ಪಿ.ಡಬ್ಲ್ಯೂ - 1** |
| **ದಿನಾಂಕ :-** | **20.09.2024** |

| | |
|---|---|
| ಹೆಸರು | ಲಿಟ್ಟಿ ಜೋಸೆಫ್ |
| ತಂದೆ/ತಾಯಿ/ಗಂಡನ ಹೆಸರು | ಬೈಜು ಜಾಯ್ |
| ವಯಸ್ಸು | 45 ವರ್ಷ |
| ಉದ್ಯೋಗ | ಶಿಕ್ಷಕಿ |
| ವಾಸ | ಸರ್ಜಾಪುರ |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಪ್ರಾಜ್ಞ ಸ. ಸ. ಅ ರವರಿಂದ**

ಸಾಕ್ಷಿಗೆ ದೂರು ಮತ್ತು ಸ್ಥಳಪಂಚನಾಮೆ ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 1 ಮತ್ತು 2 ಎಂದು, ಸಾಕ್ಷಿಯ ಸಹಿಗಳನ್ನು 1 (ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ದಿನಾಂಕ 11-01-2019 ರಂದು ಬೆಳಿಗ್ಗೆ 10-30 ಗಂಟೆ ಸುಮಾರಿಗೆ ಒಬ್ಬ ವ್ಯಕ್ತಿ ನನ್ನ ಗಂಡನ ಮೊಬೈಲ್ ನಿಂದ ಕರೆ ಮಾಡಿ ನನ್ನ ಗಂಡನಿಗೆ ಕಾಡ ಅಗ್ರಹಾರ ರಸ್ತೆಯಲ್ಲಿ ಅಪಘಾತ ಆಗಿದೆ ಎಂದು ತಿಳಿಸಿದರು. ನಂತರ ನಾನು ಆ ಸ್ಥಳಕ್ಕೆ ಹೋಗಿ ನೋಡಿದಾಗ, ನನ್ನ ಗಂಡನನ್ನು ಅಲ್ಲಿಂದ ಬೆಸ್ಟ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿಂದ ಸ್ಪರ್ಶ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ತಿಳಿಯಿತು. ನಂತರ ನಾನು ಆ ಆಸ್ಪತ್ರೆಗೆ ಹೋದಾಗ ಮಧ್ಯಾಹ್ನ 1-00 ಗಂಟೆಗೆ ವೈದ್ಯರು ನನ್ನ ಗಂಡ ಮೃತಪಟ್ಟಿದ್ದಾರೆ ಎಂದು ತಿಳಿಸಿದರು.

ಘಟನೆ ದಿನ ನನ್ನ ಗಂಡ ಮೋಟರ್ ಸೈಕಲ್ ನಂಬರ್ ಎಚ್‌ಯು-1811 ರಲ್ಲಿ ಹೋಗುತ್ತಿದ್ದಾಗ ಅಪಘಾತ ಆಗಿರುತ್ತದೆ. ನಂತರ ನಾನು ಪೋಲಿಸ್ ಠಾಣೆಗೆ ಹೋಗಿ ನಿಪಿ 1 ರಂತೆ ದೂರು ಕೊಟ್ಟಿರುತ್ತೇನೆ. ದೂರು ಕೊಟ್ಟ ನಂತರ ಪೋಲಿಸರು ಮರುದಿನ ಘಟನಾ ಸ್ಥಳದಲ್ಲಿ ಬೆಳಿಗೆ 8 ರಿಂದ 9 ಗಂಟೆ ಸಮಯದಲ್ಲಿ ಪಂಚನಾಮೆ ಮಾಡಿರುತ್ತಾರೆ. ಆಗ ನಾನು, ಚಾಸಾ 2 ಮತ್ತು 3 ರವರು ಇದ್ದೆವು. ಆಗ ನಾವು ನಿಪಿ 2 ಪಂಚನಾಮೆಗೆ ಸಹಿ ಮಾಡಿರುತ್ತೇವೆ. ದಿನಾಂಕ 23-1-2019 ರಂದು ನಾವು ಮೋಟಾರ್ ಸೈಕಲನ್ನು ಬಿಡಿಸಿಕೊಂಡಿರುತ್ತೇವೆ. ಬಾಂಡನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು.

**(ಮಾನ್ಯ ಸ. ಸ. ಅ ಸಾಕ್ಷಿಯನ್ನು  ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಹಾಗೂ ವಾಟೀ ಸವಾಲಿಗೆ ಅವಕಾಶ ಕೋರಿದ್ದು, ಅವರ ಮನವಿ ಅಂಗೀಕರಿಸಿ ವಾಟೀ ಸವಾಲಿಗೆ ಅವಕಾಶ ಮಾಡಿಕೊಡಲಾಗಿದೆ.)**

**ವಾಟೀ ಸವಾಲುಃ ಪ್ರಾಜ್ಞ ಸ. ಸ. ಅ ರವರಿಂದ**

ನಿಪಿ 2 ಪಂಚನಾಮೆ ಮಾಡಿದಾಗ ಮೋಟಾರ್ ಸೈಕಲನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ನಂತರ ನಾನು ಗೂಡ್ಸ್ ವಾಹನ ನಂಬರ್ ಕೆಎ-08-5731 ರ ಚಾಲಕನ ಅತೀವೇಗ ಮತು ್ತ ಅಜಾಗರೂಕತೆಯಿಂದ ಆ ದಿನ ಅಪಘಾತ ಆಗಿದೆ ಎಂದು ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿ.

**ವಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಇ ಎನ್ ವಕೀಲರಿಂದಃ**

ಘಟನೆ ದಿನ ನನ್ನ ಗಂಡ ಬೆಳಿಗ್ಗೆ 10-00 ಗಂಟೆಗೆ ಮನೆ ಬಿಟ್ಟಿರುತ್ತಾರೆ. ನಾವು ವಾಸ ಇರುವುದು ಸರ್ಜಾಪುರದಲ್ಲಿ. ಘಟನಾ ಸ್ಥಳಕ್ಕೆ ಸರ್ಜಾಪುರದಿಂದ 3 ರಿಂದ 4 ಕಿಲೋಮೀಟರ್ ದೂರ ಆಗಬಹುದು. ನನಗೆ 10-30 ಗಂಟೆ ಸುಮಾರಿಗೆ ಮಾಹಿತಿ ತಿಳಿದಿರುತ್ತದೆ. ಯಾರು ನನಗೆ ಕರೆ ಮಾಡಿದರು ಎಂದರೆ ಅವರ ಹೆಸರು ನಮಗೆ ಗೊತ್ತಿಲ್ಲ. ತಕ್ಷಣ ನಾನು ಮನೆ ಬಿಟ್ಟು ಅಲ್ಲಿಗೆ ಹೊರಟಿರುತ್ತೇನೆ. ನಾನು ಮೊದಲಿಗೆ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಆಗ ನನ್ನ ಗಂಡ ಅಲ್ಲಿ ಇರಲಿಲ್ಲ ಎಂದರೆ ಸರಿ. ನಂತರ ನಾನು ಅವರನ್ನು ಸ್ಪರ್ಶ್ ಆಸ್ಪತ್ರೆಯಲ್ಲಿ ನೋಡಿರುತ್ತೇನೆ ಎಂದರೆ ಸರಿ. ದೂರು ಕೊಡುವವರೆಗೂ ಯಾರ ತಪ್ಪಿ ನಿಂದ ಅಪಘಾತ ಆಗಿದೆ ಎಂದು ನನಗೆ ತಿಳಿದಿರಲಿಲ್ಲ ಎಂದರೆ ಸರಿ. ಪೋಲಿಸರ ಹೇಳಿಕೆ ಮೇರೆಗೆ ನಾನು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಮರಣ ಹೊಂದಿದ ಕಾರಣ ನಾನು ವಿಮಾ ಪರಿಹಾರ ಪಡೆಯಲು ದೂರು ಕೊಟ್ಟಿದ್ದೇನೆಂದರೆ ಸರಿಯಲ್ಲ.

ನನ್ನ ಗಂಡನ ಅಂತ್ಯಕ್ರಿಯೆ ಕೇರಳದಲ್ಲಿ ಮಾಡಿರುತ್ತೇವೆ. ಘಟನೆ ಆದ ಮಾರನೇ ಆದ 12 ಗಂಟೆಗೆ ಅವರನ್ನು ಕೇರಳಕ್ಕೆ ತೆಗೆದುಕೊಂಡು ಹೋಗಿರುತ್ತೇವೆ. ಅಲ್ಲಿ ಅವರ ಅಂತ್ಯಕ್ರಿಯೆ ದಿನಾಂಕ 14-1-2019 ರಂದು ಮಾಡಿರುತ್ತೇವೆ. ಅವಾಗ ನಾನು ಕೇರಳದಲ್ಲಿ ಇದ್ದೆ ಎಂದರೆ ಸರಿ. ನಿಪಿ 2 ಕ್ಕೆ ಸಹಿ ನಾನು ಪೋಲಿಸ್ ಠಾಣೆಯಲ್ಲಿ ಮಾಡಿದ್ದೇನೆಂದರೆ ಸರಿ. ಪಂಚನಾಮೆ ಮಾಡಿದಾಗ ನಾನು ಅಲ್ಲಿ ಇರಲಿಲ್ಲ ಎಂದರೆ ಪಂಚನಾಮೆ ಮಾಡಿದಾಗ ಇಲ್ಲೇ ಇದ್ದೆ ಎಂದು ನುಡಿದಿರುತ್ತಾರೆ. ಪೋಲಿಸರು ನನಗೆ ನೋಟಿಸ್ ಕೊಟ್ಟ ಬಗ್ಗೆ ನೆನಪಿಲ್ಲ. ನಿಪಿ 2 ಕ್ಕೆ ನನ್ನ ಜೊತೆ ಬಂದವರು ಸಹ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತಾರೆಂದರೆ ಸರಿ. ಮಹಜರ್ ಮಾಡಿದಾಗ ಘಟನಾ ಸ್ಥಳಕ್ಕೆ ಬಂದ ಪೋಲಿಸರು ಹೆಸರು ಏನು ಎಂದರೆ ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ಮಹಜರ್ ಮಾಡಿದಾಗ ಎಷ್ಟು ಜನ ಸೇರಿದ್ದರು ಎಂದರೆ ನನಗೆ ನೆನಪಿಲ್ಲ. ಮಹಜರನ್ನು ಯಾರು ಬೆರೆದುಕೊಂಡು ಎಂದು ನನಗೆ ನೆನಪಿಲ್ಲ. ಬರೆದ ನಂತರ ಮಹಜರ್ ಅನ್ನು  ನಮಗೆ ಓದಿ ತಿಳಿಸಿರುತ್ತಾರೆ.  ವಿಮಾ ಹಣವನ್ನು ಪಡೆಯುವ ಸಲುವಾಗಿ ನಾನು ಹಾಗೂ ಪೋಲಿಸರು ಸೇರಿ ಸುಳ್ಳು ಪ್ರಕರಣ ಮಾಡಿ ಆರೋಪಿ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಾಗಲೇ ವಿಮಾ ಹಣ ಪಡೆದಿರುತ್ತೇನೆಂದರೆ ಸರಿ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**